"ಮಧುರ ಮಕ್ಕಳೇ - ಒಂದುವೇಳೆ ತಂದೆಯ ಜೊತೆ ಮಿಲನ ಮಾಡಿ ಪಾವನರಾಗಬೇಕೆಂದರೆ, ಸತ್ಯ-ಸತ್ಯ ಆತ್ಮಿಕ ಪ್ರಿಯತಮನನ್ನು ನೆನಪು ಮಾಡಬೇಕು, ಒಬ್ಬ ತಂದೆಯ ವಿನಃ ಯಾರ ನೆನಪನ್ನು ಮಾಡಬಾರದು"

ಪ್ರಶ್ನೆ: ಯಾವ ಬ್ರಾಹ್ಮಣರು ದೇವತೆಗಳಾಗುತ್ತಾರೆ, ಆ ಬ್ರಾಹ್ಮಣರ ಪದವಿ ದೇವತೆಗಳಿಂತಲೂ ಶ್ರೇಷ್ಠ ಹೇಗೆ?

ಉತ್ತರ: ಬ್ರಾಹ್ಮಣರು ಈ ಸಮಯದಲ್ಲಿ ಸತ್ಯವಾದ ಆತ್ಮಿಕ ಸಂಘ ಸೇವಕರಾಗಿದ್ದಾರೆ. ಮನುಷ್ಯಾತ್ಮರಿಗೆ ಪವಿತ್ರತೆ, ಯೋಗದ ಇಂಜೆಕ್ಷನ್ ಹಾಕುತ್ತಾರೆ. ಭಾರತದ ಮುಳುಗಿ ಹೋಗಿರುವ ದೋಣಿಯನ್ನು ಪಾರು ಮಾಡುತ್ತಾರೆ. ನರಕವಾಸಿ ಭಾರತವನ್ನು ಸ್ವರ್ಗವಾಸಿಯನ್ನಾಗಿ ಮಾಡುತ್ತಾರೆ. ಇಂತಹ ಸೇವೆ ದೇವತೆಗಳು ಮಾಡಲು ಸಾಧ್ಯವಿಲ್ಲ. ಅವರಂತೂ ಈ ಸಮಯದ ಸೇವೆಯ ಪ್ರಾಲಬ್ಧವನ್ನು ಭೋಗಿಸುತ್ತಾರೆ. ಆದ್ದರಿಂದ ಬ್ರಾಹ್ಮಣರು ದೇವತೆಗಳಿಗಿಂತಲೂ ಶ್ರೇಷ್ಠರಾಗಿದ್ದಾರೆ.

ಗೀತೆ: ನಮ್ಮ ತೀರ್ಥ ಯಾತ್ರೆ ಭಿನ್ನವಾಗಿದೆ..........

ಓಂ ಶಾಂತಿ. ಮಕ್ಕಳು ಹಾಡನ್ನು ಕೇಳಿದಿರಿ. ನಾವೆಲ್ಲರೂ ಜೀವಾತ್ಮಗಳಾಗಿದ್ದೇವೆ. ಆತ್ಮ ಹಾಗೂ ಶರೀರ, ಆತ್ಮ ಆತ್ಮನಾಗಿದ್ದು ಹಾಗೂ ಶರೀರವನ್ನು ಜೀವ ಎಂದು ಕರೆಯಲಾಗುವುದು. ಆತ್ಮಗಳು ಪರಂಧಾಮದಿಂದ ಬರುತ್ತಾರೆ. ಇಲ್ಲಿಗೆ ಬಂದು ಶರೀರವನ್ನು ಧಾರಣೆ ಮಾಡುತ್ತವೆ. ಇದು ಕರ್ಮಕ್ಷೇತ್ರವಾಗಿದೆ, ನಾವು ಇಲ್ಲಿಗೆ ಬಂದು ಪಾತ್ರ ಮಾಡುತ್ತೇವೆ. ನಾನೂ ಸಹ ಪಾತ್ರ ಮಾಡಬೇಕೆಂದು ತಂದೆ ತಿಳಿಸುತ್ತಾರೆ. ನಾನು ಪತಿತರನ್ನು ಪಾವನ ಮಾಡಲು ಬಂದಿದ್ದೇನೆ. ಈ ಸಮಯ ಈ ಪತಿತ ಪ್ರಪಂಚದಲ್ಲಿ ಪಾವನರು ಒಬ್ಬರೂ ಇಲ್ಲ. ಮತ್ತೆ ಪಾವನ ಪ್ರಪಂಚದಲ್ಲಿ ಪತಿತರು ಒಬ್ಬರೂ ಇರುವುದಿಲ್ಲ. ಸತ್ಯಯುಗ, ತ್ರೇತಾ ಪಾವನ, ದ್ವಾಪರ, ಕಲಿಯುಗ ಪತಿತವಾಗಿರುತ್ತದೆ. ಪತಿತ ಪಾವನ ತಂದೆಯೇ ಬಂದು ಎಲ್ಲರಿಗೂ ಶಿಕ್ಷಣ ಕೊಡುತ್ತಾರೆ-ಹೇ ಆತ್ಮಗಳೇ ನೀವು ಈ ಶರೀರದ ಜೊತೆ ಎಂಬತ್ತನಾಲ್ಕು ಜನ್ಮಗಳ ಪಾತ್ರವನ್ನು ಪೂರ್ಣ ಮಾಡಿದ್ದೀರಿ, ಅದರಲ್ಲಿ ಅರ್ಧ ಸಮಯ ಸುಖ, ಅರ್ಧ ಸಮಯ ದುಃಖವನ್ನು ಪಡೆಯುವಂತಾಯಿತು. ದುಃಖವೂ ಸಹ ನಿಧಾನ ನಿಧಾನವಾಗಿ ಪ್ರಾರಂಭವಾಗುತ್ತದೆ. ಈಗ ಬಹಳ ದುಃಖವಿದೆ. ಮುಂದೆ ಇನ್ನೂ ಬಹಳ ಆಪತ್ತುಗಳು ಬರುತ್ತವೆ. ಈ ಸಮಯದಲ್ಲಿ ಎಲ್ಲರೂ ಭ್ರಷ್ಟಾಚಾರಿಗಳಾಗಿದ್ದಾರೆ. ಒಬ್ಬರ ಸಂಬಂಧವೂ ತಂದೆ ಜೊತೆ ಇಲ್ಲವಾಗಿದೆ. ಆತ್ಮ ತನ್ನನ್ನು ಮರೆತು ಬಿಟ್ಟಿದೆ. ಈಗ ತಂದೆ ಕುಳಿತು ತಿಳಿಸುತ್ತಿದ್ದಾರೆ, ಹೇಗೆ ನೀವು ಪ್ರಿಯತಮರಾಗಿದ್ದೀರಿ, ನಾನು ಪ್ರಿಯತಮನಾಗಿದ್ದೇನೆ. ಅದೇ ರೀತಿ ಹೇಗೆ ಒಂದು ಹುಡಗಾ ಹಾಗೂ ಹುಡುಗಿ ಇರುತ್ತಾರೆ, ಪರಸ್ಪರ ಒಬ್ಬರಿಗೊಬ್ಬರು ಪರಿಚಯವಿರುವುದಿಲ್ಲ, ಯಾವಾಗ ನಿಶ್ಚಿತಾರ್ಥವಾಗುತ್ತದೆ, ಆಗ ಪರಸ್ಪರ ಪ್ರಿಯತಮ ಪ್ರಿಯತಮೆಯರಾಗಿ ಬಿಡುತ್ತಾರೆ. ಆ ನಿಶ್ಚಿತಾರ್ಥವೂ ಸಹ ವಿಕಾರಕ್ಕಾಗಿ ಮಾಡುತ್ತಾರೆ. ವಿಕಾರಿ ಎಂದು ಪತಿತ ಪ್ರಿಯತಮ-ಪ್ರಿಯತಮೆಗೆ ಹೇಳುತ್ತಾರೆ. ಅದೇ ರೀತಿ ಇನ್ನೊಂದು ರೀತಿಯ ಪ್ರಿಯತಮ ಪ್ರಿಯತಮೆಯರಿದ್ದು ಅವರು ಕೇವಲ ಚೆಹರೆಯ ಆಕರ್ಷಣೆಯಲ್ಲಿರುತ್ತಾರೆ, ಹೇಗೆ ಲೈಲಾ ಮಜ್ನೂ ಮುಂತಾದವರು ಪರಸ್ಪರ ಚೆಹರೆಯನ್ನು ನೋಡುತ್ತಿದ್ದರು. ಅವರು ವಿಕಾರಕ್ಕೆ ವಶವಾಗುತ್ತಿರಲಿಲ್ಲ. ಹೇಗೆ ಕೆಲಸ ಕಾರ್ಯ ಮಾಡುತ್ತಾ-ಮಾಡುತ್ತಾ ಪ್ರಿಯತಮ ಅವರ ಮುಂದೆ ನಿಲ್ಲುವಂತೆ ಆಗುತ್ತಿದ್ದು. ಅದೇ ರೀತಿ ಮೀರಾಳ ಮುಂದೆ ಕೃಷ್ಣ ಬಂದು ನಿಂತು ಬಿಡುತ್ತಿದ್ದನು. ಈಗ ಇದು ಪರಮಪಿತ ಪರಮಾತ್ಮ ಪ್ರಿಯತಮರೊಂದಿಗೆ ನಾವೆಲ್ಲಾ ಆತ್ಮಗಳು ಪ್ರಿಯತಮೆಯರಾಗಿದ್ದೇವೆ. ಎಲ್ಲರೂ ಅವರನ್ನು ನೆನಪು ಮಾಡುತ್ತಾರೆ. ಈ ರೀತಿ ಬಹಳ ಪ್ರಿಯತಮೆಯರಿದ್ದು ಎಲ್ಲರಿಗೂ ಒಬ್ಬರೇ ಪ್ರಿಯತಮನಾಗಿದ್ದಾರೆ. ಎಲ್ಲಾ ಮನುಷ್ಯ ಮಾತ್ರರು ಆ ಒಬ್ಬ ಪ್ರಿಯತಮನಿಗೆ ಮೋಹಿತರಾಗಿದ್ದಾರೆ. ಭಗವಂತನೊಂದಿಗೆ ಮಿಲನ ಮಾಡುವ ಸಲುವಾಗಿ ಭಕ್ತಿ ಮಾಡುತ್ತಾರೆ. ಭಕ್ತರು ಪ್ರಿಯತಮೆ ಆಗಿದ್ದು, ಭಗವಂತ ಪ್ರಿಯತಮನಾಗಿದ್ದಾರೆ. ಈಗ ಇವರ ಮಿಲನ ಹೇಗೆ ಆಗುತ್ತದೆ. ಸರ್ವರ ಪ್ರಿಯತಮ ಒಬ್ಬ ಪರಮಾತ್ಮನಾಗಿದ್ದು ಅವರು ಈ ಸೃಷ್ಟಿಯಲ್ಲಿ ಬರುತ್ತಾರೆ. ಈಗ ಬಂದು ಹೇಳುತ್ತಾರೆ-ಒಂದುವೇಳೆ ನೀವು ಮಕ್ಕಳು ನನ್ನೊಂದಿಗೆ ಮಿಲನ ಮಾಡಬೇಕೆಂದರೆ ನಿರಂತರವಾಗಿ ನನ್ನನ್ನು ನೆನಪು ಮಾಡಿ. ನನ್ನೊಂದಿಗೆ ಸಂಬಂಧವನ್ನು ಜೋಡಿಸಿ ನನಗೆ ಮೋಹಿತರಾಗಿ. ಈ ರಾವಣ ರಾಜ್ಯದಲ್ಲಿ ದುಃಖವೇ ದುಃಖವಿದೆ. ನಾನು ನಿಮ್ಮನ್ನು ಪಾವನ ಮಾಡಲು ಬಂದಿದ್ದೇನೆ. ಇದು ನಿಮ್ಮ ಅಂತಿಮ ಜನ್ಮವಾಗಿದೆ, ಆದುದರಿಂದ ನನ್ನನ್ನು ನೆನಪು ಮಾಡಿದರೆ ನಿಮ್ಮ ವಿಕರ್ಮ ವಿನಾಶವಾಗಿ ಬಿಡುತ್ತದೆ. ಧರ್ಮರಾಜನ ಶಿಕ್ಷೆಯಿಂದ ಬಿಡುಗಡೆಯಾಗುತ್ತೀರಿ. ನನ್ನ ಮುದ್ದು ಮಕ್ಕಳೇ, ಈಗ ಇದು ಅಂತಿಮ ಸಮಯವಾಗಿದೆ, ತಲೆಯ ಮೇಲೆ ಪಾಪಗಳ ಹೊರೆಯಿದೆ, ಈಗ ನೀವು ಪುಣ್ಯಾತ್ಮರಾಗಬೇಕು. ಯೋಗದಿಂದ ವಿಕರ್ಮ ವಿನಾಶವಾಗಿ ಪುಣ್ಯಾತ್ಮರಾಗುತ್ತೀರಿ ಎಂದು ನಿರಾಕಾರ ತಂದೆ ಹೇಳುತ್ತಾರೆ. ಅರವತ್ತು ಮೂರು ಜನ್ಮಗಳು ನೀವು ಪಾಪಾತ್ಮರಾಗಿದ್ದು, ಈಗ ನಿಮ್ಮನ್ನು ಪಾಪಾತ್ಮರಿಂದ ಪುಣ್ಯಾತ್ಮರನ್ನಾಗಿ ಮಾಡುತ್ತೇನೆಂದು ತಂದೆ ಹೇಳುತ್ತಾರೆ. ದೇವತೆಗಳು ಪುಣ್ಯಾತ್ಮರಾಗಿದ್ದರು. ಪಾಪಾತ್ಮರು ಪುಣ್ಯಾತ್ಮರ ಪೂಜೆಯನ್ನು ಮಾಡುತ್ತಾರೆ. ಇದು ನಿಮ್ಮ ಅಂತಿಮ ಜನ್ಮವಾಗಿದೆ, ಎಲ್ಲರೂ ಈ ದೇಹವನ್ನು ಬಿಟ್ಟು ಹೋಗಬೇಕಾಗಿರುವುದರಿಂದ ಏಕೆ ಆಸ್ತಿಯನ್ನು ಪಡೆಯಬಾರದು? ಏಕೆ ನೀವು ಪುಣ್ಯಾತ್ಮರಾಗಬಾರದು? ವಿಕಾರದಲ್ಲಿ ಹೋಗುವುದು ಎಲ್ಲಕ್ಕಿಂತಲೂ ದೊಡ್ಡ ಪಾಪವಾಗಿದೆ. ವಿಕಾರಿಯನ್ನು ಪತಿತ ನಿರ್ವಿಕಾರಿಯನ್ನು ಪಾವನ ಎಂದು ಕರೆಯಲಾಗುತ್ತದೆ.

ಸನ್ಯಾಸಿಗಳೂ ಸಹ ಪತಿತವಾಗಿರುವ ಕಾರಣ ಮನೆ ಮಠವನ್ನು ಬಿಡುತ್ತಾರೆ. ಮತ್ತೆ ಯಾವಾಗ ಅವರು ಸನ್ಯಾಸಿ ಅರ್ಥಾತ್ ಪಾವನರಾಗುತ್ತಾರೆ, ಆಗ ಎಲ್ಲರೂ ಅವರಿಗೆ ತಲೆ ಬಾಗುತ್ತಾರೆ. ಮೊದಲು ಪತಿತರಾಗಿದ್ದಾಗ ಯಾರೂ ಸಹ ತಲೆ ಬಾಗುತ್ತಿರಲಿಲ್ಲ. ಇಲ್ಲಿ ಆ ರೀತಿ ತಲೆ ಬಾಗುವ ಮಾತೇ ಇಲ್ಲ. ತಂದೆ ಮಕ್ಕಳಿಗೆ ಶ್ರೀಮತ ಕೊಡುತ್ತಾರೆ-ತಮ್ಮನ್ನು ಆತ್ಮನೆಂದು ತಿಳಿದುಕೊಳ್ಳಿ, ನಾವು ಇಲ್ಲಿಗೆ ಬಂದಿರುವುದು ಪಾತ್ರ ಮಾಡುವ ಸಲುವಾಗಿ, ಈಗ ಪುನಃ ತಂದೆಯ ಜೊತೆ ಹಿಂತಿರುಗಬೇಕಾಗಿದೆ. ಈಗ ಭೌತಿಕ ತೀರ್ಥ ಯಾತ್ರೆಗಳೆಲ್ಲವು ಸಮಾಪ್ತಿ ಆಗಬೇಕಾಗಿದೆ. ಈಗ ನೀವು ಮನೆಗೆ ಹಿಂತಿರುಗಿ ಹೋಗಬೇಕು. ಯಾತ್ರೆ ಮಾಡುವ ಸಮಯದಲ್ಲಿ ಸಾಮಾನ್ಯವಾಗಿ ಪವಿತ್ರವಾಗಿರುತ್ತಾರೆ, ಪುನಃ ಮನೆಗೆ ಬಂದು ಪತಿತರಾಗುತ್ತಾರೆ. ಆದುದರಿಂದ ಅದು ಅಲ್ಪಕಾಲದ ಭೌತಿಕ ಯಾತ್ರೆಯಾಗಿದೆ. ಈಗ ನಾನು ನಿಮಗೆ ಆತ್ಮಿಕ ಯಾತ್ರೆಯನ್ನು ಕಲಿಸುತ್ತೇನೆ. ನೀವು ನನ್ನ ಶ್ರೀಮತದಂತೆ ನಡೆಯುವದರಿಂದ ಅರ್ಧ ಕಲ್ಪ ಅಪವಿತ್ರರಾಗುವುದಿಲ್ಲವೆಂದು ತಂದೆ ಹೇಳುತ್ತಾರೆ. ಸತ್ಯಯುಗದಲ್ಲಿ ರಾಧೆ ಕೃಷ್ಣರ ನಿಶ್ಚಿತಾರ್ಥವನ್ನು ಪತಿತರಾಗುವ ಸಲುವಾಗಿ ಮಾಡುವುದಿಲ್ಲ. ಅಲ್ಲಿ ಎಲ್ಲರೂ ಪಾವನರಾಗಿರುತ್ತಾರೆ. ಯೋಗಬಲದಿಂದ ಮಕ್ಕಳ ಜನ್ಮವಾಗುತ್ತದೆ. ಯೋಗಬಲದಿಂದ ನೀವು ವಿಶ್ವದ ಮಾಲೀಕರೂ ಸಹ ಆಗುತ್ತೀರಿ. ಅಲ್ಲಿಯ ಮಕ್ಕಳು ಚಂಚಲವಾಗಿರುವುದಿಲ್ಲ, ಏಕೆಂದರೆ ಅಲ್ಲಿ ಮಾಯೆ ಇರುವುದೇ ಇಲ್ಲ. ಮಕ್ಕಳೂ ಸಹ ಉತ್ತಮ ಕರ್ಮವನ್ನು ಮಾಡುತ್ತಾರೆ. ಅಲ್ಲಿಯ ಕರ್ಮ ಅಕರ್ಮವಾಗಿರುತ್ತದೆ. ಈ ರಾವಣ ರಾಜ್ಯದಲ್ಲಿ ನಿಮ್ಮ ಕರ್ಮ ವಿಕರ್ಮವಾಗಿರುತ್ತದೆ. ಆಟವೇ ಈ ರೀತಿ ಮಾಡಲ್ಪಟ್ಟಿದೆ. ನೀವೆಲ್ಲಾ ಕುಮಾರ-ಕುಮಾರಿಯರು ಪರಸ್ಪರ ಸಹೋದರ-ಸಹೋದರಿಯಾಗಿದ್ದೀರಿ. ಶಿವ ತಂದೆಗೆ ಮೊಮ್ಮಕ್ಕಳಾಗಿರುವ ಕಾರಣ ಸ್ವರ್ಗದ ರಾಜ್ಯಭಾಗ್ಯದ ಆಸ್ತಿ ತಾತನಿಂದ ಪ್ರಾಪ್ತಿ ಆಗುತ್ತದೆ. ಈಗ ತಂದೆಯೂ ಬಂದು ಸ್ತ್ರೀ ಪುರುಷರೆಲ್ಲರಿಗೂ ತಮ್ಮ ಜೊತೆ ಸಂಬಂಧ ಜೋಡಿಸುವುದನ್ನು ಕಲಿಸುತ್ತಿದ್ದಾರೆ. ಆದುದರಿಂದ ಗೃಹಸ್ಥ ವ್ಯವಹಾರದಲ್ಲಿ ಪವಿತ್ರರಾಗಿದ್ದು, ತಮ್ಮ ಬಹುದೂರಿತನವನ್ನು ತೋರಿಸಬೇಕೆಂದು ತಂದೆ ಹೇಳುತ್ತಾರೆ. ಜೊತೆಯಲ್ಲಿದ್ದು ಕಾಮಾಗ್ನಿಯಿಂದ ದೂರ ಇದ್ದು ತೋರಿಸಿದಾಗ ಶ್ರೇಷ್ಠ ಪದವಿಯನ್ನು ಪಡೆಯುತ್ತೀರಿ. ಭೀಷ್ಮ ಪಿತಾಮಹನಂತೆ ಬ್ರಹ್ಮಾಚಾರಿಯಾಗುವುದರಲ್ಲಿ ಬಹಳ ಶ್ರಮವಿದೆ. ಆದುದರಿಂದ ಇದನ್ನು ಜನ ಕಷ್ಟವೆಂದು ತಿಳಿದುಕೊಳ್ಳುತ್ತಾರೆ, ಆದರೆ ಯುಕ್ತಿಯನ್ನು ತಂದೆ ಮಾತ್ರ ತಿಳಿಸುತ್ತಾರೆ.

ಶಿವ ಭಗವಾನುವಾಚ-ಕೃಷ್ಣನಿಗೆ ಭಗವಂತ ಎಂದು ಹೇಳುವುದಿಲ್ಲ. ಕೃಷ್ಣನು ದೈವೀಗುಣಗಳುಳ್ಳ ಮನುಷ್ಯನಾಗಿದ್ದಾನೆ. ಬ್ರಹ್ಮಾ, ವಿಷ್ಣು, ಶಂಕರರು ಸೂಕ್ಷ್ಮವತನವಾಸಿಗಳಾಗಿದ್ದಾರೆ. ಬ್ರಹ್ಮಾರವರ ಪದವಿ ವಿಷ್ಣುವಿಗಿಂತಲೂ ಶ್ರೇಷ್ಠವಾಗಿದೆ. ಹೇಗೆ ಬ್ರಾಹ್ಮಣರ ಪದವಿ ದೇವತೆಗಳಿಂತಲೂ ಶ್ರೇಷ್ಠವಾಗಿದೆ, ಏಕೆಂದರೆ ಈ ಸಮಯದಲ್ಲಿ ನೀವು ಆತ್ಮಿಕ ಸಮಾಜ ಸೇವಕರಾಗಿದ್ದೀರಿ. ಮನುಷ್ಯಾತ್ಮಗಳಿಗೆ ಪವಿತ್ರತೆ, ಯೋಗದ ಇಂಜಕ್ಷನ್ ಕೊಡುತ್ತೀರಿ. ನೀವು ಈ ಸಮಯದಲ್ಲಿ ಭಾರತವನ್ನು ಸ್ವರ್ಗವನ್ನಾಗಿ ಮಾಡುತ್ತಿದ್ದೀರಿ, ಆದುದರಿಂದ ಶ್ರೇಷ್ಠ ಕಾರ್ಯವನ್ನು ಮಾಡುವಂತಹವರ ಮಹಿಮೆ ಶ್ರೇಷ್ಠವಾಗಿರುತ್ತದೆ. ನೀವು ದೇವತೆಗಳಾಗುತ್ತಿದ್ದರೂ ಸಹ ಈ ಸಮಯದಲ್ಲಿ ಬ್ರಾಹ್ಮಣರಾಗಿ ಸೇವೆ ಮಾಡುತ್ತೀರಿ, ದೇವತಾ ರೂಪದಲ್ಲಿ ಎಂದಿಗೂ ಸೇವೆ ಮಾಡುವುದಿಲ್ಲ. ಅಲ್ಲಿ ಕೇವಲ ನೀವು ರಾಜ್ಯ ಮಾಡುತ್ತೀರಿ. ನರಕವಾಸಿಗಳನ್ನು ಸ್ವರ್ಗವಾಸಿಗಳನ್ನಾಗಿ ಮಾಡುವುದು ನಿಮ್ಮ ಸೇವೆಯಾಗಿದೆ, ಆದುದರಿಂದ ವಂದೇ ಮಾತರಮ್ ಎಂದು ಹೇಳುತ್ತಾರೆ. ಇದು ಶಿವಶಕ್ತಿ ಸೈನ್ಯವಾಗಿದೆ, ಶಕ್ತಿ (ಮಮ್ಮಾ)ಯರನ್ನು ಸಿಂಹದ ಮೇಲೆ ತೋರಿಸುತ್ತಾರೆ, ಆದರೆ ಆ ರೀತಿಯೇನೂ ಇಲ್ಲ. ನೀವು ಶಕ್ತಿಯರಾಗಿದ್ದೀರಿ, ಏಕೆಂದರೆ ನೀವೀಗ ಪಂಚವಿಕಾರಗಳ ಮೇಲೆ ವಿಜಯಿಗಳಾಗುತ್ತೀರಿ ಹಾಗೂ ಭಾರತವನ್ನು ಸ್ವರ್ಗವನ್ನಾಗಿ ಮಾಡುತ್ತಿದ್ದೀರಿ. ಈ ಸೇವೆ ಶ್ರೇಷ್ಠವಾಗಿರುವದರಿಂದ ಬಹಳ ಶಕ್ತಿಯರ ಮಂದಿರಗಳಿವೆ. ಅದರಲ್ಲಿ ಮುಖ್ಯ ಒಬ್ಬರ ಮಂದಿರವಾಗಿದೆ, ಅವರಿಗೂ ಸಹ ಶಕ್ತಿ ಕೊಡುವಂತಹವರು ಶಿವತಂದೆ ಆಗಿದ್ದಾರೆ. ಎಲ್ಲವು ಶಿವತಂದೆಯ ಮಹಿಮೆಯಾಗಿದೆ. ನಂತರ ಯಾರು ಅವರಿಗೆ ಸಹಯೋಗಿಗಳಾಗುತ್ತಾರೆ ಅವರ ಹೆಸರು ಇರುತ್ತದೆ. ಪಾಂಡವರಿಗೂ ಮಹಾರಥಿಯೆಂದು ಕರೆಯಲಾಗುತ್ತದೆ. ಅಲ್ಲಿ ಸ್ತ್ರೀ ಪುರುಷರು ಇಬ್ಬರೂ ಇರಬೇಕಾಗುತ್ತದೆ. ಏಕೆಂದರೆ ಇದು ಪ್ರವೃತ್ತಿ ಮಾರ್ಗವಾಗಿದೆ. ವಿಕಾರಿ ಗುರುಗಳನ್ನು ಎಂದಿಗೂ ಮಾಡಿಕೊಳ್ಳಬಾರದು. ಗೃಹಸ್ಥದಲ್ಲಿರುವವರು ಗುರುಗಳನ್ನು ಮಾಡಿಕೊಳ್ಳುವುದರಿಂದ ಏನೂ ಲಾಭವಿಲ್ಲ. ಗೃಹಸ್ಥಿ ಅಥವಾ ಪತಿತರಿಗೆ ಪತಿತರು ಸಿಗುವಂತಾಯಿತು, ಅವರೆಂದಿಗೂ ಪಾವನ ಮಾಡಲು ಸಾಧ್ಯವಿಲ್ಲ. ಸನ್ಯಾಸಿಗಳ ಅನುಯಾಯಿಗಳೆಂದು ತಮ್ಮನ್ನು ಹೇಳಿಕೊಳ್ಳುತ್ತಾರೆ, ಆದರೆ ಸ್ವಯಂ ಸನ್ಯಾಸಿ ಆಗಿರದ ಕಾರಣ ಅದೂ ಸಹ ಸುಳ್ಳಾಯಿತಲ್ಲವೆ. ಈ ಸಮಯದಲ್ಲಿ ಬಹಳ ಮೋಸ ನಡೆಯುತ್ತದೆ. ಗೃಹಸ್ಥಿಗಳೇ ಗುರುವಾಗಿ ಕುಳಿತು ಬಿಡುತ್ತಾರೆ. ಪವಿತ್ರತೆಗೆ ಮಾನ್ಯತೆ ಇರುವುದಿಲ್ಲ. ಆದರೆ ಇಲ್ಲಿ ತಂದೆಯೂ ನೀವು ಪವಿತ್ರರಾಗಿದ್ದರೆ ಮಾತ್ರ ನನ್ನ ಮಕ್ಕಳೆಂದು ಹೇಳಿಕೊಳ್ಳಬೇಕು, ಪಾವನರಾಗದೆ ರಾಜ್ಯಭಾಗ್ಯ ಸಿಗುವುದಿಲ್ಲ. ಹೀಗೆ ತಂದೆಯೊಂದಿಗೆ ಅಗತ್ಯವಾಗಿ ಸಂಬಂಧವನ್ನು ಜೋಡಿಸಬೇಕು. ಪ್ರಪಂಚದಲ್ಲಿ ಒಬ್ಬೊಬ್ಬರು-ಒಬ್ಬೊಬ್ಬರನ್ನು ಮಾನ್ಯತೆ ಮಾಡುತ್ತಾರೆ, ಹೇಗೆ ಗುರುನಾನಕ್‌ರವರನ್ನು ಮಾನ್ಯತೆ ಮಾಡುವವರು ಆ ಮನೆತನದಲ್ಲಿ ಹೋಗುತ್ತಾರೆ. ಯಾರು ಈ ಸಮಯದಲ್ಲಿ ತಂದೆಯಿಂದ ಶಿಕ್ಷಣ ಪಡೆದು ಪವಿತ್ರರಾಗುವವರು ಮಾತ್ರ ಸ್ವರ್ಗದಲ್ಲಿ ಬರುತ್ತಾರೆ. ಗುರುನಾನಕ್‌ರವರಿಗೆ ದೇವತೆ ಎಂದು ಹೇಳುವುದಿಲ್ಲ. ದೇವತೆಗಳು ಸತ್ಯಯುಗದಲ್ಲಿರುತ್ತಾರೆ. ಅಲ್ಲಿ ಅಪಾರವಾದ ಸುಖವಿರುತ್ತದೆ, ಹಾಗೂ ಬೇರೆ ಧರ್ಮದವರಿಗೆ ಸ್ವರ್ಗದ ಸುಖವು ಗೊತ್ತಿರುವುದಿಲ್ಲ. ಭಾರತವಾಸಿಗಳು ಮಾತ್ರ ಸ್ವರ್ಗದಲ್ಲಿರುತ್ತಾರೆ. ಉಳಿದವರೆಲ್ಲರೂ ನಂತರ ಬರುತ್ತಾರೆ. ಯಾರು ದೇವೀ-ದೇವತೆಗಳಾಗಬೇಕಾಗಿದೆ ಅವರೇ ಆಗುತ್ತಾರೆ. ಈ ಸಮಯದಲ್ಲಿ ದೇವತೆಗಳನ್ನು, ಲಕ್ಷ್ಮೀ-ನಾರಾಯಣರನ್ನು ನಮ್ಮ ಹಿಂದೂ ಧರ್ಮದವರೆಂದು ಪೂಜಿಸುತ್ತಾರೆ, ಏಕೆಂದರೆ ಪತಿತರಾಗಿರುವ ಕಾರಣ ತಮ್ಮ ಪವಿತ್ರ ಧರ್ಮವನ್ನು ಮರೆತು ಹಿಂದೂ ಎಂದು ಹೇಳಿಕೊಳ್ಳುತ್ತಾರೆ. ನೀವು ದೇವೀ-ದೇವತಾ

ಧರ್ಮದವರು ಹಿಂದುಗಳೆಂದು ಏಕೆ ಹೇಳಿಕೊಳ್ಳುತ್ತೀರಿ. ಹಿಂದು ಧರ್ಮ ಯಾವುದೇ ಧರ್ಮವಲ್ಲ, ಆದರೆ ದೇವತೆಗಳೇ ಕೆಳಗೆ ಇಳಿದುಬಿಟ್ಟಿದ್ದಾರೆ. ದೇವತೆಗಳು ಬಹಳ ಕಡಿಮೆ ಇರುತ್ತಾರೆ. ಅವರೇ ಇಲ್ಲಿಗೆ ಬಂದು ಮನುಷ್ಯರಿಂದ ದೇವತೆಗಳಾಗುವ ಶಿಕ್ಷಣವನ್ನು ಪಡೆಯುವರು. ಸ್ವಲ್ಪ ಶಿಕ್ಷಣ ಪಡೆದರೆ ಸಾಕು ಸಾಧಾರಣ ಪ್ರಜೆಗಳಲ್ಲಿ ಬರುತ್ತಾರೆ. ತಂದೆಯಂತೆ ಆಗುವದರಿಂದ ವಿಜಯ ಮಾಲೆಯಲ್ಲಿ ಬರುತ್ತಾರೆ. ಈಗ ಆತ್ಮಿಕ ಪ್ರಿಯತಮ ಪ್ರಿಯತಮೆಯರಾಗಬೇಕು. ಸತ್ಯಯುಗದಲ್ಲಿ ಹಾಗೂ ಕಲಿಯುಗದಲ್ಲಿ ಶಾರೀರಕ ಅರ್ಥಾತ್ ಭೌತಿಕವಾಗಿದ್ದು ಈಗ ಸಂಗಮಯುಗದಲ್ಲಿ ಮಾತ್ರ ಒಬ್ಬ ಪ್ರಿಯತಮನಿಗೆ ಆತ್ಮಿಕ ಪ್ರಿಯತಮೆಯರಾಗಬೇಕು.

ನನ್ನನು ನೆನಪು ಮಾಡುತ್ತಿರಿ ಎಂದು ತಂದೆ ಹೇಳುತ್ತಾರೆ. ವಿಕಾರದಲ್ಲಿ ಹೋಗುವದರಿಂದ ನೂರು ಪಟ್ಟು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಒಂದುವೇಳೆ ಸೋತುಬಿಟ್ಟಾಗ ಬಾಬಾ ಮುಖ ಕಪ್ಪು ಮಾಡಿಕೊಂಡು ಬಿಟ್ಟೆ ಎಂದು ಬರೆಯಬೇಕು. ಮಕ್ಕಳೇ ಈಗ ನೀವು ಪಾವನರಾಗಬೇಕೆಂದು ತಿಳಿಸುತ್ತಾರೆ. ಕೃಷ್ಣನಿಗೆ ಶ್ಯಾಮ ಸುಂದರನೆಂದು ಹೇಳುತ್ತಾರೆ, ಕೃಷ್ಣನ ಆತ್ಮನೂ ಸಹ ಈ ಸಮಯದಲ್ಲಿ ಪತಿತವಾಗಿದ್ದಾನೆ. ಮತ್ತೆ ಈಗ ಜ್ಞಾನ ಚಿತೆಯ ಮೇಲೆ ಕುಳಿತು ಪಾವನ ಆಗುತ್ತಾನೆ. ಇಪ್ಪತ್ತೊಂದು ಜನ್ಮಗಳ ನಂತರ ಮತ್ತೆ ಪತಿತ ಆಗುತ್ತಾನೆ. ಇದು ಶ್ಯಾಮ ಹಾಗೂ ಸುಂದರರಾಗುವ ಆಟವಾಗಿದೆ. ಶ್ಯಾಮದಿಂದ ಸುಂದರರಾಗಲು ಒಂದು ಸೆಕೆಂಡ್ ಬೇಕಾಗುತ್ತದೆ, ಸುಂದರದಿಂದ ಶ್ಯಾಮ ಆಗಲು ಅರ್ಧ ಕಲ್ಪ ಬೇಕಾಗುತ್ತದೆ. ಅರ್ಧಕಲ್ಪ ಶ್ಯಾಮ, ಅರ್ಧಕಲ್ಪ ಸುಂದರ. ಶಿವ ತಂದೆ ಒಬ್ಬರೇ ಯಾತ್ರಿಕನಾಗಿದ್ದು ಉಳಿದವರೆಲ್ಲರೂ ಪ್ರಿಯತಮೆಯರಾಗಿದ್ದು ಪತಿತರಾಗಿದ್ದಾರೆ. ನಿಮ್ಮನ್ನು ಸುಂದರವನ್ನಾಗಿ ಮಾಡಲು ಯೋಗ ಕಲಿಸುತ್ತೇನೆ. ಸತ್ಯಯುಗದಲ್ಲಿ ಉತ್ತಮವಾದ ಸ್ವಾಭಾವಿಕ ಸುಂದರತೆ ಇರುತ್ತದೆ, ಏಕೆಂದರೆ ಪಂಚತತ್ವಗಳು ಸತೋಪ್ರಧಾನವಾಗಿರುವ ಕಾರಣ ಶರೀರ ಬಹಳ ಸುಂದರವಾಗಿರುತ್ತದೆ. ಇದಂತೂ ನಕಲಿ ಸುಂದರತೆಯಾಗಿದೆ. ಪವಿತ್ರತೆಯು ಶ್ರೇಷ್ಠವಾಗಿದೆ. ತಂದೆಯ ಬಳಿ ಬಹಳ ಆತ್ಮಗಳು ಬಂದು ಪವಿತ್ರತೆಯ ಪ್ರತಿಜ್ಞೆಯನ್ನು ಮಾಡಿ ಸೋತು ಬಿಡುತ್ತಾರೆ, ಕೆಲವರು ವಿಜಯಿಗಳಾಗುತ್ತಾರೆ. ಇದು ಈಶ್ವರೀಯ ಮಿಷನ್ ಆಗಿದೆ. ಮುಳಗಿರುವ ಭಾರತವನ್ನು ರಕ್ಷಣೆ ಮಾಡಬೇಕು. ಭಾರತದ ಹಡಗನ್ನು ರಾವಣ ಮುಳಗಿಸಿ ಬಿಟ್ಟಿದ್ದಾನೆ, ನಂತರ ತಂದೆ ರಾಮ ಬಂದು ಕಾಪಾಡುತ್ತಾರೆ. ನಿಮ್ಮ ಬುದ್ಧಿಯಲ್ಲಿ ಈಗ ನಾವು ಸ್ವರ್ಗದಲ್ಲಿ ಹೋಗಿ ವಜ್ರ ವೈಢೂರ್ಯಗಳ ಅರಮನೆ ಮಾಡುತ್ತೇವೆಂದು ತಿಳಿದುಕೊಂಡಿದ್ದೀರಿ. ನಾವು ಈ ಶರೀರವನ್ನು ಬಿಟ್ಟು ರಾಜಕುಮಾರ-ರಾಜಕುಮಾರಿ ಅಗುತ್ತೇವೆ. ಯಾರು ಮಕ್ಕಳಾಗುತ್ತಾರೆ, ಅವರಿಗೆ ಮಾತ್ರ ಈ ವಿಚಾರ ನಡೆಯುತ್ತದೆ. ಇದು ಈಶ್ವರೀಯ ಸಭೆ ಅಥವಾ ಈಶ್ವರೀಯ ಪರಿವಾರವಾಗಿದೆ. ನೀವು ಮಾತ-ಪಿತ, ನಾವು ನಿಮ್ಮ ಮಕ್ಕಳು ಎಂದು ಹೇಳುವಾಗ ಇದು ಪರಿವಾರವಾಯಿತಲ್ಲವೆ. ಈಶ್ವರ ತಾತನಾಗಿದ್ದು ಬ್ರಹ್ಮಾ ತಂದೆ ಆಗಿದ್ದಾರೆ. ನೀವು ಸಹೋದರ-ಸಹೋದರಿಯರಾಗಿದ್ದೀರಿ. ಸ್ವರ್ಗದ ಆಸ್ತಿಯನ್ನು ನೀವು ತಾತನಿಂದ ಪಡೆದು ಮತ್ತೆ ಕಳೆದುಕೊಳ್ಳಿತ್ತೀರಿ, ಆಗ ತಂದೆ ಪುನಃ ಬಂದು ಕೊಡುತ್ತಾರೆ. ನೀವೀಗ ಆಸ್ತಿಯನ್ನು ಪಡೆಯುವ ಸಲುವಾಗಿ ತಂದೆಯ ಮಕ್ಕಳಾಗಿದ್ದೀರಿ. ಬ್ರಹ್ಮಾ ತಂದೆಗೆ ಮಕ್ಕಳು, ಶಿವ ತಂದೆಗೆ ಮೊಮ್ಮಕ್ಕಳಾಗಿದ್ದೀರಿ. ಇದು ಈಶ್ವರೀಯ ಸಭೆ, ಈಶ್ವರೀಯ ಕುಟುಂಬವಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಜ್ಞಾನ ಚಿತೆಯಮೇಲೆ ಕುಳಿತು ಸಂಪೂರ್ಣ ಪಾವನರಾಗಬೇಕು. ಪವಿತ್ರತೆಯೇ ನಂಬರ್‌ವನ್ ಸುಂದರತೆಯಾಗಿದೆ, ಈ ಸುಂದರತೆಯನ್ನು ಧಾರಣೆ ಮಾಡಿ ತಂದೆಗೆ ಮಗು ಎಂದು ಹೇಳಿಕೊಳ್ಳಲು ಅಧಿಕಾರಿಯಾಗಬೇಕು.

2. ಈ ಅಂತಿಮ ವಿನಾಶದ ಸಮಯದಲ್ಲಿ ತಲೆ ಮೇಲೆ ಇರುವ ಪಾಪದ ಹೊರೆಯನ್ನು ಒಬ್ಬ ತಂದೆಯ ನೆನಪಿನಿಂದ ಸಮಾಪ್ತಿ ಮಾಡಿಕೊಳ್ಳಬೇಕು. ಪುಣ್ಯಾತ್ಮರಾಗುವ ಸಲುವಾಗಿ ಶ್ರೇಷ್ಠ ಕರ್ಮ ಮಾಡಬೇಕು.

ವರದಾನ: ಕಂಬೈಂಡ್ ಸ್ವರೂಪದ ಸ್ಮೃತಿಯ ಮೂಲಕ ಕಂಬೈಂಡ್ ಸೇವೆ ಮಾಡುವಂತಹ ಸಫಲತಾಮೂರ್ತಿ ಭವ.

ಹೇಗೆ ಶರೀರ ಹಾಗೂ ಆತ್ಮವು ಕಂಬೈಂಡ್ ಆಗಿದೆ, ಭವಿಷ್ಯ ವಿಷ್ಣು ಸ್ವರೂಪವು ಕಂಬೈಂಡ್ ಆಗಿದೆಯೋ ಅದೇರೀತಿ ತಂದೆ ಹಾಗೂ ನಾವು ಆತ್ಮವು ಕಂಬೈಂಡ್ ಆಗಿದ್ದೇವೆ - ಈ ಸ್ವರೂಪದ ಸ್ಮೃತಿಯಲ್ಲಿರುತ್ತಾ ಸ್ವ-ಸೇವೆ ಹಾಗೂ ಸರ್ವ ಆತ್ಮರುಗಳ ಸೇವೆಯನ್ನು ಒಟ್ಟೊಟ್ಟಿಗೆ ಮಾಡುತ್ತೀರೆಂದರೆ ಸಫಲತಾಮೂರ್ತಿ ಆಗಿ ಬಿಡುತ್ತೀರಿ. ಸೇವೆಯಲ್ಲಿ ನಾನು ಬಹಳ ಬ್ಯುಸಿಯಿದ್ದೆನು ಆದ್ದರಿಂದ ಸ್ವ-ಸ್ಥಿತಿಯ ಚಾರ್ಟ್ ಕಡಿಮೆಯಾಗಿ ಬಿಟ್ಟಿತು ಎಂದು ಎಂದಿಗೂ ಹೇಳಬಾರದು. ಸೇವೆ ಮಾಡುವುದಕ್ಕಾಗಿ ಹೋದಿರಿ, ಹಿಂದಿರುಗಿದ ನಂತರ ಮಾಯೆಯು ಬಂದಿತು, ಮೂಡ್ ಆಫ್ ಆಗಿ ಬಿಟ್ಟೆನು, ಬೇಸರವಾಯಿತು ಎಂದು ಹೇಳುವಂತಾಗಬಾರದು. ಸೇವೆಯಲ್ಲಿ ವೃದ್ಧಿಯ ಸಾಧನವೇ ಸ್ವಯಂ ಹಾಗೂ ಸರ್ವರ ಸೇವೆಯು ಕಂಬೈಂಡ್ ಆಗಿರುವುದು.

ಸ್ಲೋಗನ್: ಅಲ್ಪಕಾಲದ ಇಚ್ಛೆಗಳ ಅವಿದ್ಯಾ ಆಗುವುದೇ ಮಹಾನ್ ಸಂಪದ್ಭರಿತರು ಆಗುವುದಾಗಿದೆ.

ಮಾತೇಶ್ವರಿಯವರ ಅಮೂಲ್ಯ ಮಹಾವಾಕ್ಯ - ನಿರಾಕಾರಿ ಪ್ರಪಂಚ ಹಾಗೂ ಸಾಕಾರಿ ಪ್ರಪಂಚದ ವಿಸ್ತಾರ –

ಸ್ವಯಂ ಪರಮಾತ್ಮನ ಮೂಲಕ ನಾವು ತಿಳಿದಿದ್ದೇವೆ - ಒಂದಿದೆ ನಿರಾಕಾರಿ ಪ್ರಪಂಚ, ಇನ್ನೊಂದಿದೆ ಸಾಕಾರಿ ಪ್ರಪಂಚ. ಈಗ ನಿರಾಕಾರಿ ಪ್ರಪಂಚಕ್ಕೆ ಬ್ರಹ್ಮಾಂಡವೆಂದು ಹೇಳುತ್ತಾರೆ ಅರ್ಥಾತ್ ಅಖಂಡ ಜ್ಯೋತಿ ಮಹಾತತ್ವವಾಗಿದೆ. ಅದು ನಾವಾತ್ಮರು ಹಾಗೂ ಪರಮಾತ್ಮನ ನಿವಾಸ ಸ್ಥಾನವಾಗಿದೆ. ಆ ನಿರಾಕಾರ ಪ್ರಪಂಚದಲ್ಲಿಯೇ ಪರಮಾತ್ಮನು ನಾವಾತ್ಮರನ್ನು ಪಾತ್ರವನ್ನು ಅಭಿನಯಿಸುವುದಕ್ಕಾಗಿ ಸಾಕಾರ ಸೃಷ್ಟಿಯಲ್ಲಿ ಕಳುಹಿಸುತ್ತಾರೆ. ಬ್ರಹ್ಮಾಂಡದಲ್ಲಿ ಆತ್ಮರ ವೃಕ್ಷವು ಹೇಗಿದೆಯೋ ಹಾಗೆಯೇ ಸಾಕಾರ ಸೃಷ್ಟಿಯಲ್ಲಿ ಆತ್ಮರ ಶರೀರದೊಟ್ಟಿಗೆ ಇರುವ ವೃಕ್ಷವಾಗಿದೆ. ಹೇಗೆ ಜಡ ವೃಕ್ಷದ ಉದಾಹರಣೆಯನ್ನು ಕೊಡುತ್ತಾರೆ - ವೃಕ್ಷದ ಬುಡವು ಹೇಗೆ ಕೆಳಗಿರುತ್ತದೆಯೋ ಹಾಗೆಯೇ ಮನುಷ್ಯ ಸೃಷ್ಟಿಯನ್ನೂ ಉಲ್ಟಾ ವೃಕ್ಷ ಎಂದು ಹೇಳುತ್ತಾರೆ. ಏಕೆಂದರೆ ಮನುಷ್ಯ ಸೃಷ್ಟಿಯ ವೃಕ್ಷದ ಬುಡ, ಮೇಲೆ ನಿರಾಕಾರಿ ಪ್ರಪಂಚದಲ್ಲಿಯೂ ಇದೆ. ಅಲ್ಲಿಯೂ ಪ್ರತಿಯೊಂದು ಧರ್ಮದ ಸಂಬಂಧವು ಬೇರೆ-ಬೇರೆಯಾಗಿದೆ, ಆ ಪ್ರಪಂಚದಲ್ಲಿ ಸೂರ್ಯ-ಚಂದ್ರರ ಪ್ರಕಾಶತೆಯೇನೂ ಇಲ್ಲ ಆದರೆ ಆ ಪ್ರಪಂಚವಂತು ಸ್ವಯಂ ಅಖಂಡ ಜ್ಯೋತಿ ತತ್ವವಾಗಿದೆ, ಅದು ಸಂಪೂರ್ಣವಾಗಿ ಸ್ಥೂಲ ತತ್ವಗಳಿಗಿಂತ ಅತಿ ಸೂಕ್ಷ್ಮವಾಗಿದೆ. ಹೇಗೆ ಸಾಕಾರ ಸೃಷ್ಟಿ ಪಂಚ ತತ್ವಗಳಾದ ಆಕಾಶ, ವಾಯು, ಅಗ್ನಿ, ಜಲ ಹಾಗೂ ಪೃಥ್ವಿಯಿಂದ ಮಾಡಲ್ಪಟ್ಟಿದೆ. ಅದರಲ್ಲಿಯೂ ಪೃಥ್ವಿಯು ಸ್ಥೂಲ ತತ್ವವಾಗಿದೆ, ಅದಕ್ಕಿಂತಲೂ ಸೂಕ್ಷ್ಮವಾದುದು ಜಲವಾಗಿದೆ, ಅದಕ್ಕಿಂತಲೂ ಸೂಕ್ಷ್ಮ ತತ್ವವಾಗಿದೆ ಅಗ್ನಿ, ಅದಕ್ಕಿಂತಲೂ ಸೂಕ್ಷ್ಮವಾದುದು ವಾಯು, ನಂತರ ಆಕಾಶ ತತ್ವ. ಈಗ ಈ ಐದು ತತ್ವಗಳಿಗಿಂತಲೂ ಅತಿ ಸೂಕ್ಷ್ಮವಾದುದು ಈ ಅಖಂಡ ಜ್ಯೋತಿ ಮಹಾತತ್ವವಾಗಿದೆ. ಅದು ಈ ಸ್ಥೂಲ ಸೃಷ್ಟಿಯಿಂದ ಆಚೆಯಿರುವ ನಿರಾಕಾರಿ ಪ್ರಪಂಚವಾಗಿದೆ. ಅಲ್ಲಿ ನಾವು ಆತ್ಮರು ಅಂಡಾಕಾರದಲ್ಲಿ, ನಮ್ಮ ಪರಮಪಿತ ಪರಮಾತ್ಮನ ಜೊತೆಯಿರುತ್ತೇವೆ, ಅಂದಾಗ ಈ ಸಾಕಾರ ಸೃಷ್ಟಿಗಿಂತಲೂ ಭಿನ್ನವಾದುದು ಬ್ರಹ್ಮಾಂಡವಾಗಿದೆ.